# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1589
ಸದಸ್ಯರ ಹೆಸರು : ಶ್ರೀ ಎಂ. ನಾಗರಾಜು
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 18.03.2026

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ರಾಜ್ಯದಲ್ಲಿ ಪ್ರತಿನಿತ್ಯ ಸಂಚರಿಸುವ ಬಸ್‌ಗಳ ಸಂಖ್ಯೆ ಎಷ್ಟು; (ಬಿ.ಎಂ.ಟಿ.ಸಿ, ಕೆ.ಎಸ್.ಆರ್.ಟಿ.ಸಿ ಮತ್ತು ನಗರ ಸಾರಿಗೆಗಳು ಪ್ರತ್ಯೇಕ ಮಾಹಿತಿ ನೀಡುವುದು); ಗ್ರಾಮೀಣ ಪ್ರದೇಶಗಳಲ್ಲಿ ಕಡಿತಗೊಂಡ ಬಸ್ ಮಾರ್ಗಗಳ ಸಂಖ್ಯೆ ಎಷ್ಟು;</td><td>ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿನ ಬಸ್‌ಗಳ ಸಂಖ್ಯೆ ಕೆಳಕಂಡಂತಿರುತ್ತದೆ:
<table>
<tr><th>ನಿಗಮ</th><th>ಒಟ್ಟು ಬಸ್‌ಗಳು (including Electric Buses)</th></tr>
<tr><td>ಕ.ರಾ.ರ.ಸಾ.ನಿಗಮ</td><td>8584</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>6958</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>5354</td></tr>
<tr><td>ಕ.ಕ.ರಾ.ಸಾ.ನಿಗಮ</td><td>4990</td></tr>
<tr><td>ಒಟ್ಟು</td><td>25886</td></tr>
</table>
ನಾಲ್ಕು ಸಾರಿಗೆ ನಿಗಮಗಳ ವತಿಯಿಂದ ರಾಜ್ಯದಲ್ಲಿ ಪ್ರತಿನಿತ್ಯ ಸಂಚರಿಸುವ ನಗರ ಸಾರಿಗೆ ಬಸ್‌ಗಳ ಸಂಖ್ಯೆಯ ವಿವರಗಳನ್ನು "ಅನುಬಂಧ-ಅ" ರಲ್ಲಿ ಒದಗಿಸಲಾಗಿದೆ.<br><br>
ನಾಲ್ಕು ಸಾರಿಗೆ ಸಂಸ್ಥೆಗಳ ವ್ಯಾಪ್ತಿಗೆ ಬರುವ ಗ್ರಾಮೀಣ ಪ್ರದೇಶಗಳಲ್ಲಿನ ಬಸ್ ಮಾರ್ಗಗಳನ್ನು ಕಡಿತ ಮಾಡಿರುವುದಿಲ್ಲ.</td></tr>
<tr><td>ಆ.</td><td>ಸಾರಿಗೆ ಇಲಾಖೆ ವತಿಯಿಂದ 2025-2026ನೇ ಸಾಲಿನಲ್ಲಿ ಎಷ್ಟು ಹೊಸ ಎಲೆಕ್ಟ್ರಿಕ್ ಬಸ್‌ಗಳನ್ನು ಖರೀದಿಸಲಾಗಿದೆ; ಈ ಬಸ್‌ಗಳನ್ನು ಯಾವ ಸಂಸ್ಥೆಯಿಂದ ಎಷ್ಟು ಮೊತ್ತದಲ್ಲಿ ಖರೀದಿಸಲಾಗಿದೆ; ಸಾರಿಗೆ ಇಲಾಖೆಯ ಸುಪರ್ಧಿಯಲ್ಲಿ ಎಷ್ಟು ವಿದ್ಯುತ್ ಚಾಲಿತ ಬಸ್‌ಗಳು ಇವೆ; ಮತ್ತು ಖಾಸಗಿ ಒಡೆತನದ ಬಸ್‌ಗಳು ಎಷ್ಟು;</td><td>ರಾಜ್ಯದ ನಾಲ್ಕು ಸಾರಿಗೆ ನಿಗಮಗಳಲ್ಲಿ 2025-26ನೇ ಸಾಲಿನಲ್ಲಿ ಯಾವುದೇ ಹೊಸ ಎಲೆಕ್ಟ್ರಿಕ್ ಬಸ್‌ಗಳನ್ನು ಖರೀದಿಸಿರುವುದಿಲ್ಲ.<br><br>
ವಿದ್ಯುತ್ ಚಾಲಿತ ಬಸ್‌ಗಳನ್ನು Gross Cost Contract (GCC) ಮಾದರಿಯಲ್ಲಿ ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>
ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಮತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಈ ಕೆಳಕಂಡಂತೆ ಖಾಸಗಿ ಒಡೆತನದ ವಿದ್ಯುತ್ ಚಾಲಿತ ಬಸ್‌ಗಳನ್ನು Gross Cost Contract (GCC) ಮಾದರಿಯಲ್ಲಿ ಕಾರ್ಯಾಚರಣೆಯಲ್ಲಿರುತ್ತವೆ.
<table>
<tr><th>ನಿಗಮ</th><th>ಒಟ್ಟು ವಿದ್ಯುತ್ ಚಾಲಿತ ಬಸ್‌ಗಳು</th></tr>
<tr><td>ಕ.ರಾ.ರ.ಸಾ.ನಿಗಮ</td><td>50</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>1714</td></tr>
<tr><td>ಒಟ್ಟು</td><td>1764</td></tr>
</table></td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
| --- | --- | --- |
| | | ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ ಯಾವುದೇ ವಿದ್ಯುತ್ ಚಾಲಿತ ಬಸ್‌ಗಳು ಕಾರ್ಯಾಚರಣೆಯಲ್ಲಿರುವುದಿಲ್ಲ. |
| ಇ. | ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ರಸ್ತೆ ಅಪಘಾತಕ್ಕೆ ಒಳಗಾದ ಬಸ್‌ಗಳ ಸಂಖ್ಯೆ ಎಷ್ಟು; ಈ ಅಪಘಾತಗಳಲ್ಲಿ ಮೃತಪಟ್ಟವರ ಸಂಖ್ಯೆ ಎಷ್ಟು; ಮತ್ತು ಸರ್ಕಾರದಿಂದ ಎಷ್ಟು ಪರಿಹಾರ ನೀಡಲಾಗಿರುತ್ತದೆ. (ವರ್ಷವಾರು ಮಾಹಿತಿ ನೀಡುವುದು); ಮತ್ತು ಅಪಘಾತಗಳಲ್ಲಿ ಮೃತ ನೌಕರರ ಅವಲಂಭಿತರಿಗೆ ಅನುಕಂಪದ ಆಧಾರದ ಮೇಲೆ ನೌಕರಿ ನೀಡಲಾಗಿದೆಯೇ; ಇದ್ದಲ್ಲಿ ಎಷ್ಟು ಕುಟುಂಬಗಳಿಗೆ ನೌಕರಿ ನೀಡಲಾಗಿದೆ; (ಮಾಹಿತಿ ನೀಡುವುದು); | ನಾಲ್ಕು ಸಾರಿಗೆ ನಿಗಮಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ರಸ್ತೆ ಅಪಘಾತಕ್ಕೆ ಒಳಗಾದ ಬಸ್‌ಗಳ ಸಂಖ್ಯೆ ಮತ್ತು ಅಪಘಾತಗಳಲ್ಲಿ ಮೃತಪಟ್ಟವರ ಸಂಖ್ಯೆಯ ವಿವರಗಳನ್ನು **"ಅನುಬಂಧ-ಆ"**ರಲ್ಲಿ ಒದಗಿಸಲಾಗಿದೆ.<br><br>ಕಳೆದ 3 ವರ್ಷಗಳಲ್ಲಿ ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ಅಪಘಾತ ಪ್ರಕರಣಗಳಲ್ಲಿ ನೀಡಲಾದ ಪರಿಹಾರದ ವಿವರಗಳನ್ನು **"ಅನುಬಂಧ-ಇ"**ರಲ್ಲಿ ಒದಗಿಸಲಾಗಿದೆ.<br><br>ಉಳಿದಂತೆ ರಾಜ್ಯದ ನಾಲ್ಕು ಸಾರಿಗೆ ನಿಗಮಗಳಲ್ಲಿನ ಅಪಘಾತ ಪ್ರಕರಣಗಳಲ್ಲಿ ಮೃತಪಟ್ಟ ನೌಕರರ 27 ಮೃತಾವಲಂಭಿತರಿಗೆ ಅನುಕಂಪದ ಆಧಾರದ ಮೇಲೆ ನೌಕರಿ ನೀಡಿದ್ದು, ನಿಗಮವಾರು ವಿವರವನ್ನು **"ಅನುಬಂಧ-ಈ"** ರಲ್ಲಿ ಒದಗಿಸಲಾಗಿದೆ. |
| ಈ. | ಸಾರಿಗೆ ಇಲಾಖೆಯ ವ್ಯಾಪ್ತಿಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ವ್ಯಾಪ್ತಿಯಲ್ಲಿರುವ ಒಟ್ಟು ಜಮೀನು ಎಷ್ಟು; ಈ ಜಮೀನಿನಲ್ಲಿ ಎಷ್ಟು ಜಾಗವನ್ನು ಉಪಯೋಗಿಸಿಕೊಳ್ಳಲಾಗಿದೆ ಮತ್ತು ಎಷ್ಟು ಜಾಗ ಅನುಪಯುಕ್ತವಾಗಿ ಉಳಿದುಕೊಂಡಿದೆ; | ಸಾರಿಗೆ ಇಲಾಖೆಯ ವ್ಯಾಪ್ತಿಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳ ವ್ಯಾಪ್ತಿಯಲ್ಲಿ ಒಟ್ಟು 3799 ಎಕರೆ 18 ಗುಂಟೆ ಜಮೀನುಗಳಿರುತ್ತವೆ.<br><br>ಈ ಜಮೀನಿನಲ್ಲಿ 2800 ಎಕರೆ 4 ಗುಂಟೆ ಜಾಗವನ್ನು ಬಸ್ ಘಟಕ, ಬಸ್ ನಿಲ್ದಾಣ, ವಿಭಾಗೀಯ ಕಛೇರಿ, ಚಾಲಕರ ತರಬೇತಿ ಕೇಂದ್ರ, ವಿಭಾಗೀಯ ಕಾರ್ಯಾಗಾರ ಹಾಗೂ ಸಿಬ್ಬಂದಿಗಳ ವಸತಿ ಗೃಹ ನಿರ್ಮಾಣಕ್ಕಾಗಿ ಉಪಯೋಗಿಸಿಕೊಳ್ಳಲಾಗಿರುತ್ತದೆ. ಇನ್ನುಳಿಯುವ 999 ಎಕರೆ 14 ಗುಂಟೆ ಜಮೀನು ಖಾಲಿಯಿದ್ದು, ಮುಂದಿನ ದಿನಗಳಲ್ಲಿ ಮೂಲಭೂತ ಸೌಕರ್ಯಗಳೊಂದಿಗೆ ಬಸ್ ಘಟಕ, ಬಸ್ ನಿಲ್ದಾಣ, ಕಾರ್ಯಾಗಾರ ಹಾಗೂ ಸಿಬ್ಬಂದಿಗಳ ವಸತಿಗೃಹ/ ವಿಶ್ರಾಂತಿ ಗೃಹಗಳ ನಿರ್ಮಾಣಕ್ಕಾಗಿ ಕಾಯ್ದಿರಿಸಲಾಗಿರುತ್ತದೆ. |
| ಉ. | ಸದರಿ ಸಂಸ್ಥೆಗಳ ಒಟ್ಟು ಜಮೀನುಗಳಲ್ಲಿ ಎಷ್ಟು ಜಮೀನು ಮೊಕದ್ದಮೆಯಲ್ಲಿದೆ; ಸದರಿ ಮೊಕದ್ದಮೆಗಳು ಯಾವ ವರ್ಷಗಳಿಂದ ಬಾಕಿ ಇದೆ ಮತ್ತು ಎಷ್ಟು ಪ್ರಕರಣಗಳು ಇತ್ಯರ್ಥಗೊಂಡಿವೆ? (ಮಾಹಿತಿ ನೀಡುವುದು) | ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ಒಟ್ಟು 3799.18 ಎಕರೆ ಜಮೀನಿನ ಪೈಕಿ 83.11 ಎ/ಗು ಜಮೀನು ಮೊಕದ್ದಮೆಯಲ್ಲಿದ್ದು, 124 ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ. 2013ರಿಂದ ಮೊಕ್ಕದ್ದಮೆಗಳು ಬಾಕಿ ಇದ್ದು, ಒಟ್ಟು 66 ಪ್ರಕರಣಗಳು ಇತ್ಯರ್ಥಗೊಂಡಿವೆ. |

ಸಂಖ್ಯೆ: ಟಿಡಿ 97 ಟಿಸಿಕ್ಯೂ 2026

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು

"ಅನುಬಂಧ-ಅ"

**ನಾಲ್ಕು ಸಾರಿಗೆ ನಿಗಮಗಳ ವತಿಯಿಂದ ರಾಜ್ಯದಲ್ಲಿ ಪ್ರತಿನಿತ್ಯ ಸಂಚರಿಸುವ ನಗರ ಸಾರಿಗೆ ಬಸ್ ಗಳ ಸಂಖ್ಯೆಯ ವಿವರಗಳು ಕೆಳಕಂಡಂತಿರುತ್ತದೆ:**

| ಕ್ರ.ಸಂ | ನಿಗಮ | ನಗರ ಸಾರಿಗೆ |
|---|---|---|
| 1 | ಕರಾರಸಾನಿ | 530 |
| 2 | ಬೆಂಮಸಾಸಂಸ್ಥೆ | 6300 |
| 3 | ವಾಕರಸಾ ಸಂಸ್ಥೆ | 586 |
| 4 | ಕಕರಸಾ ನಿಗಮ | 226 |
| | **ಒಟ್ಟು** | **7642** |

"ಅನುಬಂಧ-ಆ"

**ನಾಲ್ಕು ಸಾರಿಗೆ ನಿಗಮಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ರಸ್ತೆ ಅಪಘಾತಕ್ಕೆ ಒಳಗಾದ ಬಸ್‌ಗಳ ಸಂಖ್ಯೆ ಮತ್ತು ಅಪಘಾತಗಳಲ್ಲಿ ಮೃತಪಟ್ಟವರ ಸಂಖ್ಯೆಯ ವಿವರಗಳು**

| ಕ್ರ.ಸಂ | ವಿವರ | ನಿಗಮ | 2022-23 | 2023-24 | 2024-25 |
|---|---|---|---|---|---|
| 1 | ಅಪಘಾತಗಳ ಸಂಖ್ಯೆ | ಕರಾರಸಾನಿ | 770 | 847 | 890 |
| | | ಬೆಂಮಸಾಸಂಸ್ಥೆ | 207 | 209 | 170 |
| | | ವಾಕರಸಾ ಸಂಸ್ಥೆ | 363 | 378 | 437 |
| | | ಕಕರಸಾ ನಿಗಮ | 327 | 351 | 420 |
| | | **ಒಟ್ಟು** | **1667** | **1785** | **1917** |
| 2 | ಅಪಘಾತದಲ್ಲಿ ಮೃತಪಟ್ಟವರ ಸಂಖ್ಯೆ | ಕರಾರಸಾನಿ | 263 | 279 | 277 |
| | | ಬೆಂಮಸಾಸಂಸ್ಥೆ | 55 | 53 | 45 |
| | | ವಾಕರಸಾ ಸಂಸ್ಥೆ | 103 | 123 | 126 |
| | | ಕಕರಸಾ ನಿಗಮ | 118 | 108 | 140 |
| | | **ಒಟ್ಟು** | **539** | **563** | **311** |

ಅನುಬಂಧ-ಇ"

**ಅಪಘಾತಕ್ಕೆ ಒಳಗಾದವರು/ಅಪಘಾತದಲ್ಲಿ ಮೃತಪಟ್ಟವರ ಅವಲಂಭಿತರಿಗೆ ನೀಡಿರುವ ಪರಿಹಾರದ ಮೊತ್ತದ ವಿವರಗಳು**

| ವರ್ಷ | ಒಟ್ಟು (ರೂ.ಕೋಟಿಗಳಲ್ಲಿ) |
|---|---|
| 2022-23 | 160.26 |
| 2023-24 | 145.62 |
| 2024-25 | 193.96 |

ಅನುಬಂಧ "ಈ"

ನಿಗಮವಾರು ಅಪಘಾತಗಳಲ್ಲಿ ಮೃತನೌಕರರ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೌಕರಿ ನೀಡಿರುವ ಮೃತಾವಲಂಬಿತರ ಸಂಖ್ಯೆ

| ವರ್ಷ | ಅನುಕಂಪದ ಆಧಾರದ ಮೇಲೆ ನೌಕರಿ ನೀಡಿರುವ ಮೃತಾವಲಂಬಿತರ ಸಂಖ್ಯೆ | | | | ಒಟ್ಟು |
|---|---|---|---|---|---|
| Corporations | KSRTC | BMTC | KKRTC | NWKRTC | |
| 2023-2024 | 1 | 3 | 4 | 0 | 8 |
| 2024-2025 | 0 | 0 | 3 | 6 | 9 |
| 2025-2026 | 5 | 2 | 3 | 0 | 10 |
| **ಒಟ್ಟು** | **6** | **5** | **10** | **6** | **27** |

***